ಭೇಟಿಯಾಗು. ನನ್ನ ಕೆಲವು ಕೆಲಸಗಳನ್ನು ನೀನು ಮಾಡಿಕೊಡಬೇಕು. ನನ್ನ ಹತ್ಯಾರಗಳ ಕಿಟ್ಟನ್ನು ನಿನಗೆ ಕಾಣಿಕೆಯನ್ನಾಗಿ ಕೊಡಬೇಕೆಂದು ತೀರ್ಮಾನಿಸಿದ್ದೇನೆ. ನೀನು ಸಾವಿರ ಡಾಲರುಗಳನ್ನು ತೆತ್ತರೂ ಅವು ನಿನಗೆ ಸಿಗಲಿಕ್ಕಿಲ್ಲ. ಅವುಗಳನ್ನು ಪಡೆಯಲು ನೀನು ಎಷ್ಟೊಂದು ಹಾತೊರೆಯುತ್ತಿರುವೆ ಎಂದು ನನಗೆ ಚೆನ್ನಾಗಿ ಗೊತ್ತು. ಒಂದು ವರ್ಷದ ಹಿಂದೆ ನಾನು ದಂಧೆಯನ್ನು ನಿಲ್ಲಿಸಿದ್ದೇನೆ. ನಾನೀಗ ಪ್ರಾಮಾಣಿಕ ಜೀವನವನ್ನು ನಡೆಸುತ್ತಿದ್ದೇನೆ. ಒಂದು ಮಿಲಿಯನ್ ಡಾಲರ್ ಸಿಗುವಂತಿದ್ದರೂ ನನಗೆ ಈ ದಂಧೆ ಬೇಡ. ಎರಡು ವಾರಗಳಲ್ಲಿ ನನ್ನ ಮದುವೆ ನಿಶ್ಚಯವಾಗಲಿದೆ. ಜಗತ್ತಿನಲ್ಲೇ ಅತ್ಯಂತ ಬೆಲೆಬಾಳುವ ಮಾಣಿಕ್ಯವೊಂದು ನನಗೆ ದೊರೆತಿದೆ. ಭೂತಕಾಲವನ್ನು ಕೆದಕಿ ಬರುವವರ ಸಹವಾಸವೇ ಬೇಡ. ಮದುವೆಯಾದಂತೇ ನಾನು ಇಲ್ಲಿಂದ ಉತ್ತರದ ಕಡೆಗೆ ಹೋಗಲು ತೀರ್ಮಾನಿಸಿದ್ದೇನೆ. ಬಿಲ್ಲಿ, ನಾನು ಮದುವೆಯಾಗಲಿರುವ ಹುಡುಗಿ ನಿಜಕ್ಕೂ ಒಬ್ಬಳು ದೇವತೆ ಕಣೋ! ಅವಳಿಗೆ ನನ್ನ ಮೇಲೆ ಅದೆಷ್ಟು ಭರವಸೆ! ನನಗೆ ಅವಳ ಕಣ್ಣಲ್ಲಿ ಸಣ್ಣವನಾಗುವುದು ಖಂಡಿತ ಇಷ್ಟವಿಲ್ಲ. ನೀನು ಸಿಗಲೇ ಬೇಕು. ನಾನು ಕಿಟ್ಟನ್ನು ತರುತ್ತಿದ್ದೇನೆ.



ನಿನ್ನ ಹಳೆಯ ಸ್ನೇಹಿತ,

ಜಿಮ್ಮಿ.

ಜಿಮ್ಮಿ ಪತ್ರ ಬರೆದ ಆ ಸೋಮವಾರದಂದು, ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಡಿಟೆಕ್ಟಿವ್ ಬೆನ್‌ಪ್ರೈಸ್ ಎಲ್ಮೋರಕ್ಕೆ ಬಂದು ಇಳಿದ. ಎಲ್ಮೋರಾ ದೊಡ್ಡ ಊರೇನಲ್ಲ. ಅವನು ಹುಡುಕಿಕೊಂಡು ಬಂದ ಮಾಹಿತಿ ದೊರೆಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಅವನು ನಿಂತುಕೊಂಡಿದ್ದ ಔಷಧಿ ಅಂಗಡಿಯ ಎದುರುಗಡೆಯೇ ಸ್ಪೆನ್ಸರನ ಪಾದರಕ್ಷೆ ಅಂಗಡಿ ಕಾಣಿಸುತ್ತಿತ್ತು. ಅಲ್ಲಿಂದಲೇ ಅವನು ರಾಲ್ಫ್ ಸ್ಪೆನ್ಸರನ್ನು ಸರಿಯಾಗಿ ಗಮನಿಸಿದ.

‘ಬ್ಯಾಂಕರನ ಮಗಳನ್ನು ಮದುವೆಯಾಗಲು ನಿಶ್ಚಯಿಸಿದ್ದೀಯಾ ಜಿಮ್ಮಿ?! ಒಳ್ಳೇದು. ನಿನಗೆ ಶುಭಾಶಯಗಳು!’ ಅವನು ಮನದಲ್ಲೇ ನಗೆಯಾಡಿದ.

ಮರುದಿನ ಜಿಮ್ಮಿಯ ಉಪಹಾರ ಆಡಮ್ಸರ ಮನೆಯಲ್ಲೇ ಆಯಿತು. ತನ್ನ ಮದುವೆಯ ಸೂಟನ್ನು ಹೊಲಿಸಲು ಹಾಗೂ ಅನ್ನಾಬೆಲಾಳಿಗೆ ಏನಾದರೂ ಪ್ರೆಸೆಂಟ್ ತರಲೆಂದು ಅವನು